# A

**22718** **120 MINUTES**

1. 'ಸೌಂದರ್ಯ ಸಮೀಕ್ಷೆ' ವಿಮರ್ಶಾ ಕೃತಿಯ ಕರ್ತೃ
   - A) ಕುವೆಂಪು
   - B) ರಂ.ಶ್ರೀ. ಮುಗಳಿ
   - C) ಪುತಿನ
   - D) ಜಿ.ಎಸ್. ಶಿವರುದ್ರಪ್ಪ

2. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ
   - A) ದ್ರಾವಿಡ ಶಬ್ದದ ನಿಷ್ಪತ್ತಿ : ಎಂ.ಬಿ. ಎಮಿನೊ
   - B) ದ್ರಾವಿಡ ಭಾಷೆಗಳ ವರ್ಗೀಕರಣ : ರೆ। ಎಫ್. ಕಿಟೆಲ್
   - C) ದ್ರಾವಿಡ ಭಾಷೆಗಳ ಪದಾದಿಯ ಸ್ವರವ್ಯತ್ಯಯ : ಭ. ಕೃಷ್ಣಮೂರ್ತಿ
   - D) ಮೂಲ ದ್ರಾವಿಡ ಶಬ್ದಗಳಲ್ಲಿ ಘೋಷ ಸ್ಪರ್ಶ ವಿಚಾರ : ಟಿ. ಬರೊ

3. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?
   - A) ತಮಿಳು, ತೊದ : ಉತ್ತರ ದ್ರಾವಿಡ ಭಾಷೆಗಳು
   - B) ತೆಲುಗು, ಕುರುಖ್ : ಮಧ್ಯ ದ್ರಾವಿಡ ಭಾಷೆಗಳು
   - C) ಕನ್ನಡ, ತುಳು : ಪ್ರಾತ್ಯಯಿಕ ಭಾಷೆಗಳು
   - D) ಮಲಯಾಳಂ, ಕೊಡವ : ದಕ್ಷಿಣ ದ್ರಾವಿಡ ಭಾಷೆಗಳು

4. ಇವುಗಳಲ್ಲಿ ಖಂಡ ಕಾವ್ಯಗಳು
   - A) ಚಿತ್ರಾಂಗದ, ವೈಶಾಖಿ
   - B) ದೀಪದ ಮಲ್ಲಿ, ಇರುವಂತಿಗೆ
   - C) ನಲ್ಮೆ, ಕಾಣಿಕೆ
   - D) ಅಹಲ್ಯೆ, ಶಬರಿ

5. ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ
   - A) ನಿರಂಜನ. ವೈದೇಹಿ, ಪಂಜೆ, ಕಡೆಂಗೋಡ್ಲು
   - B) ಪಂಜೆ, ಕಡೆಂಗೋಡ್ಲು, ನಿರಂಜನ, ವೈದೇಹಿ
   - C) ವೈದೇಹಿ, ಕಡೆಂಗೋಡ್ಲು, ಪಂಜೆ, ನಿರಂಜನ
   - D) ಕಡೆಂಗೋಡ್ಲು, ನಿರಂಜನ, ಪಂಜೆ, ವೈದೇಹಿ

6. ಕ್ರಿ.ಶ. 2022ರಲ್ಲಿ ಕಣ್ಮರೆಯಾದ ಕನ್ನಡದ ಕವಿ
   - A) ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
   - B) ಕೆ.ಎಸ್. ನರಸಿಂಹಸ್ವಾಮಿ
   - C) ಚನ್ನವೀರ ಕಣವಿ
   - D) ಕಯ್ಯಾರ ಕಿಞ್ಞಣ್ಣ ರೈ

7. ಇವುಗಳಲ್ಲಿ ಡಿ.ಆರ್. ನಾಗರಾಜರ ವಿಮರ್ಶಾ ಕೃತಿಗಳು
   1. ಅಮೃತ ಮತ್ತು ಗರುಡ
   2. ನಿರಪೇಕ್ಷ
   3. ಸಾಹಿತ್ಯ ಕಥನ
   4. ವಚನ ವಿನ್ಯಾಸ

   ಸರಿಯಾದ ಉತ್ತರಗಳು
   - A) 1 ಮತ್ತು 2
   - B) 2 ಮತ್ತು 4
   - C) 3 ಮತ್ತು 4
   - D) 1 ಮತ್ತು 3

8. ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ.
   - A) ಆಂಡಯ್ಯ, ಪೊನ್ನ, ಕರ್ಣಪಾರ್ಯ, ದುರ್ಗಸಿಂಹ
   - B) ಕರ್ಣಪಾರ್ಯ, ಪೊನ್ನ, ಆಂಡಯ್ಯ, ದುರ್ಗಸಿಂಹ
   - C) ಪೊನ್ನ, ದುರ್ಗಸಿಂಹ, ಕರ್ಣಪಾರ್ಯ, ಆಂಡಯ್ಯ
   - D) ದುರ್ಗಸಿಂಹ, ಆಂಡಯ್ಯ, ಪೊನ್ನ, ಕರ್ಣಪಾರ್ಯ

9. 'ಪದ್ಯಂ ಸಮಸ್ತ ಜನತಾ ಹೃದ್ಯಂ' ಈ ಮಾತು ಯಾವ ಗ್ರಂಥದಲ್ಲಿದೆ?
A) ಅಪ್ರತಿಮ ವೀರ ಚರಿತೆ B) ಶೃಂಗಾರ ರತ್ನಾಕರ
C) ಕವಿರಾಜಮಾರ್ಗ D) ಕಾವ್ಯಾವಲೋಕನ

10. 'ಮದಲಿಂಗನ ಕಣಿವೆ' ಕಥನ ಕವನದ ಕರ್ತೃ
A) ಮಾಸ್ತಿ B) ಜಿ.ಎಸ್. ಶಿವರುದ್ರಪ್ಪ
C) ನಿಸಾರ್ ಅಹಮದ್ D) ಕೆ.ಎಸ್. ನರಸಿಂಹ ಸ್ವಾಮಿ

11. ಇದೊಂದು ನವ್ಯ ಪಂಥಕ್ಕೆ ಸೇರಿದ ಕಾದಂಬರಿ
A) ಗಿರಿಯ ನವಿಲು B) ಸ್ವಾಮಿ ಅಪರಂಪಾರ
C) ಗ್ರಾಮಾಯಣ D) ಮುಕ್ತಿ

12. 'ಹೀಗೆ ನನಗೆ ಹಬ್ಬವಾಗಿ । ಇನಿಯರಿಬ್ಬರನ್ನು ತೂಗಿ । ಇವಳ ಸೊಬಗನವಳು ತೊಟ್ಟು । ನೋಡಬಯಸಿದೆ' – ಈ ಸಾಲುಗಳನ್ನು ಬರೆದ ಕವಿ
A) ಡಿ.ವಿ.ಜಿ. B) ಬಿ.ಎಂ.ಶ್ರೀ
C) ಎನ್.ಎಸ್. ಲಕ್ಷ್ಮೀನಾರಾಯಣ ಭಟ್ D) ಜಿ.ಪಿ. ರಾಜರತ್ನಂ

13. ಇವುಗಳಲ್ಲಿ ರೋಮ್ಯಾಂಟಿಕ್ ತತ್ವದ ಆಶಯವುಳ್ಳ ವಿಮರ್ಶಾ ಕೃತಿ
A) ನಿರಪೇಕ್ಷ B) ಸಾಹಿತ್ಯ ಕಥನ
C) ಪ್ರಜ್ಞೆ ಮತ್ತು ಪರಿಸರ D) ದ್ರೌಪದಿಯ ಶ್ರೀಮುಡಿ

14. ಇವುಗಳಲ್ಲಿ ಸಮಾಸ ಪದ
A) ಕಾರ್ಗಾಲ B) ದಡ್ಡತನ C) ಮಾತುಗಾರಿಕೆ D) ಬರವಣಿಗೆ

15. ಜಾನಪದಕ್ಕೆ ಸಂಬಂಧಿಸಿದಂತೆ ಬರುವ 'ಪುರಾಣ ಮೂಲ ಸಿದ್ಧಾಂತ'ದ ಪ್ರತಿಪಾದಕ
A) ಮ್ಯಾಕ್ಸ್ ವೀಬರ್ B) ಪೀಟರ್ ಜೆ. ಕ್ಲಾಸ್
C) ವಿಲ್ ಹೆಲ್ಮ್ D) ಬಿ.ಎಲ್. ರೈಸ್

16. 'ಅಕಾಳವೃಷ್ಟಿಯಾಯ್ತು ಇನ್ನವು ಭಕ್ತಿಗಿದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್' ಈ ಮಾತು ಎಲ್ಲಿ ಕಂಡುಬರುತ್ತದೆ?
A) ಕಬ್ಬಿಗರ ಕಾವ B) ಅತ್ತಿಮಬ್ಬೆಯ ಲಕ್ಕುಂಡಿ ಶಾಸನ
C) ರಾಮಾಶ್ವಮೇಧ D) ಬುಕ್ಕರಾಯನ ಶಾಸನ

17. 'ಊರಿಗೆ ದಾರಿಯನಾರು ತೋಱಿದರೇನು?। ಸಾರಾಯಮಪ್ಪ ನಿಜವನಱುಹಿಸುವ । ಗುರುವಾರಾದೊಡೇನು?' – ಈ ಸಾಲುಗಳನ್ನು ರಚಿಸಿದವರು.
A) ಜೇಡರ ದಾಸಿಮಯ್ಯ B) ಶ್ರೀಪಾದರಾಯ
C) ಸಿದ್ಧರಾಮ D) ಸರ್ವಜ್ಞ

18. 'ಕುಲ ಕುಲವೆಂದು ಹೊಡೆದಾಡದಿರಿ' ಎಂದು ಹೇಳಿದ ಹರಿದಾಸರು.
A) ಪುರಂದರ ದಾಸ B) ಕನಕದಾಸ C) ವ್ಯಾಸರಾಯ D) ಶ್ರೀಪಾದ ರಾಯ

19. ವಸಾಹತೋತ್ತರ ವಿಮರ್ಶೆಯ ಪ್ರಮುಖ ಚಿಂತಕ
A) ಎಡ್ವರ್ಡ್ ಸಯೀದ್ B) ಐ.ಎ. ರಿಚರ್ಡ್ಸ್
C) ಸೈಮೆನ್ ಡೆ ಬೋವ D) ರೇಮಂಡ್ ವಿಲಿಯಮ್ಸ್

20. 'ರಸ ಗಂಗಾಧರ' ಅಲಂಕಾರ ಶಾಸ್ತ್ರಗ್ರಂಥದ ಕರ್ತೃ

A) ರುದ್ರಟ
B) ಜಗನ್ನಾಥ ಪಂಡಿತ
C) ವಿಶ್ವನಾಥ
D) ಅಭಿನವ ಗುಪ್ತ

21. ಇವರಲ್ಲಿ ಕನ್ನಡ ವ್ಯಾಕರಣ ಗ್ರಂಥಗಳ ಸಂಪಾದನೆಯ ಕ್ಷೇತ್ರದಲ್ಲಿ ಖ್ಯಾತರಾದವರು.

A) ಎಂ. ಮರಿಯಪ್ಪ ಭಟ್
B) ಜಿ. ವರದರಾಜ ರಾವ್
C) ಆರ್.ಸಿ. ಹಿರೇಮಠ
D) ಡಿ.ಎಲ್. ನರಸಿಂಹಾಚಾರ್

22. 'ಶಿವನಾದೊಡೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್' – ಈ ಮಾತು ಯಾವ ಕಾವ್ಯದಲ್ಲಿ ಬರುತ್ತದೆ?

A) ಗಿರಿಜಾ ಕಲ್ಯಾಣ
B) ಮುದ್ರಾ ಮಂಜೂಷ
C) ಕಬ್ಬಿಗರ ಕಾವ
D) ಜೈಮಿನಿ ಭಾರತ

23. 'ಆ ಮೂವರ್ ಕವಿಗಳ್ ಜಿನಸಮಯ ದೀಪಕರ್' ಎಂಬ ಕವಿವಾಣಿಯಲ್ಲಿ ಬರುವ ಮೂವರು ಕವಿಗಳು

A) ಶ್ರೀವಿಜಯ, ಪಂಪ, ಚಾವುಂಡರಾಯ
B) ಜನ್ನ, ನೇಮಿಚಂದ್ರ, ರತ್ನಾಕರವರ್ಣಿ
C) ಪಂಪ, ಪೊನ್ನ, ರನ್ನ
D) ದುರ್ಗಸಿಂಹ, ನಯಸೇನ, ನಾಗಚಂದ್ರ

24. ಇವುಗಳಲ್ಲಿ ಕವಿ ರನ್ನನ ಕಾವ್ಯಗಳಲ್ಲಿರುವ ಉಕ್ತಿಗಳು

1. ಮರಣಕ್ಕೆನ್ನಿಂದೆ ನೀಂ ಮುಂಚಿದಯ್, ಮೊನೆಯೊಳ್
   ಸೂಟ್ಟಿಡಮಾಯ್ತು ಇದೊಂದೆಡೆಯೊಳಂ
2. ನೈರ್ಮಲ್ಯ ಶೋಭಾಕಲಿತಂ ತ್ರೈಲೋಕ್ಯ ಲಕ್ಷ್ಮೀಮಣಿಮುಕುರಮೆನಲ್
3. ಮುಚ್ಚು ಮುಚ್ಚಾನನಮಂ ಎನುತುಮಾಕಾಂತೆ ವಿಭ್ರಾಂತೆಯಾದಳ್
4. ಮೊಲೆವೆತ್ತ ತೈಲ ಜನನಿಯ ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್

A) 1 ಮತ್ತು 2 B) 2 ಮತ್ತು 3 C) 3 ಮತ್ತು 4 D) 1 ಮತ್ತು 4

25. ಕಾಲಾಂತರದಲ್ಲಿ ಕನ್ನಡದಲ್ಲಿ ಉತ್ತಮಾರ್ಥ ಪಡೆದ ಶಬ್ದಗಳು

A) ಕೂಳ್, ದೇಗುಲ, ಅಗ್ಗ
B) ಅಭ್ಯಾಸ, ಗವೇಷಣ, ಓಲೆ
C) ಮರ್ಯಾದೆ, ಸಾಹಸಿ, ಸಭಿಕ
D) ಜಂಗಮ, ಪೊನ್, ಮುಡಿ

26. ತಾನು, ತಾವು – ಈ ಪದಗಳು ಸರ್ವನಾಮಗಳಲ್ಲಿ ಯಾವ ವರ್ಗಕ್ಕೆ ಸೇರುತ್ತವೆ

A) ಪುರುಷಾರ್ಥಕ B) ಆತ್ಮಾರ್ಥಕ C) ಸಂಬಂಧಾರ್ಥಕ D) ನಿರ್ದೇಶಕ

27. ಇವುಗಳಲ್ಲಿ ಸಮರ್ಪಕವಾದ ಹೇಳಿಕೆ ಯಾವುದು?

A) ಖಾಲಿ ಜಾಗವನ್ನು ಭರ್ತಿ ಮಾಡುವ ಲೇಖನವೆ ನುಡಿಚಿತ್ರ
B) ಆಸಕ್ತಿ ಕೆರಳಿಸುವ ವಿಷಯದ ಆಕರ್ಷಕ ನಿರೂಪಣೆಯೆ ನುಡಿಚಿತ್ರ
C) ಸುದ್ದಿಯೊಂದರ ಸಾಮಾನ್ಯ ವರದಿಯೆ ನುಡಿಚಿತ್ರ
D) ಸಾಹಿತ್ಯಕ ಮೌಲ್ಯವಿರುವ ಮತ್ತು ಪತ್ರಿಕೆಯ ಧೋರಣೆಯನ್ನು ಸಾರುವ ಲೇಖನವೆ ನುಡಿಚಿತ್ರ

28. 'ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ' – ಈ ಮಾತು ಯಾವ ಪಾತ್ರದ ಕುರಿತಾಗಿ ಬಂದಿದೆ?

A) ರಾವಣ B) ಸೀತೆ C) ಲಕ್ಷ್ಮಣ D) ಮಂಡೋದರಿ

29. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ?
A) ಎಲ್ಲಮ್ಮನ ಕಾವ್ಯ : ಚೌಡಕಿಯವರು
B) ಜನಪದ ವೃತ್ತಿ ಗಾಯಕರು : ಕಂಸಾಳೆಯವರು
C) ಬಿ.ಎಲ್. ರೈಸ್ : ಜನಪದ ಕುಣಿತಗಳು
D) ಗೊರವರು : ಮೈಲಾರ ಲಿಂಗ

30. ಇವುಗಳಲ್ಲಿ ತದ್ಧಿತಾಂತ ಯಾವುದು?
A) ಬಳವಿ B) ಹಣವಂತ C) ಬೆನ್ನೀರ್ D) ಗೆಲವು

31. ಇದು ಕನ್ನಡದ ಒಂದು ಮುಕ್ತ ಆಕೃತಿಮಾ
A) ಕುಸುಮ B) ದವಾಖಾನೆ C) ಜನನ D) ಮೊಸರು

32. ಕೆಲವು ದ್ರಾವಿಡ ಭಾಷೆಗಳಲ್ಲಿ ಕಾಣುವ ಘೋಷ ಮತ್ತು ಅಘೋಷ ಧ್ವನಿಮಾಗಳ ವಿನಿಮಯ ಕುರಿತು ಮೊದಲು ಪ್ರತಿಪಾದಿಸಿದವರು
A) ಬ್ಲೂಮ್ ಫೀಲ್ಡ್ B) ರಾಬರ್ಟ್ ಕಾಲ್ಡವೆಲ್
C) ರಾಸ್‌ಮಸ್ ರಾಸ್ಕ್ D) ಸರ್ ಫ್ರಾನ್ಸಿಸ್ ವೈಟ್ ಎಲ್ಲಿಸ್

33. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?
A) ಜಿ.ಎಚ್. ನಾಯಕ : ನವ್ಯ ವಿಮರ್ಶೆ
B) ಸಾತತ್ಯ : ಎಲ್. ಎಸ್. ಶೇಷಗಿರಿ ರಾವ್
C) ಆಶಯ ಆಕೃತಿ : ಸಿ. ವೀರಣ್ಣ
D) ಕೃತಿ ಪರೀಕ್ಷೆ : ಜಿ.ಎಸ್. ಅಮೂರ

34. ಮೂಲ ದ್ರಾವಿಡದ ಪದಾದಿಯ ಕಕಾರವು ಚಕಾರವಾಗುವ ಪ್ರವೃತ್ತಿ ಯಾವ ಭಾಷೆಯಲ್ಲಿ ಕಂಡುಬರುವುದಿಲ್ಲ.
A) ಕನ್ನಡ B) ತಮಿಳು C) ತೆಲುಗು D) ಮಲಯಾಳ

35. ಇವುಗಳಲ್ಲಿ ಶ್ರೀಕೃಷ್ಣ ಆಲನ ಹಳ್ಳಿಯವರ ಕಾದಂಬರಿ
A) ಚಿರಸ್ಮರಣೆ B) ಅಬ್ರಾಹ್ಮಣ C) ಕಾಡು D) ಶರಪಂಜರ

36. ಬೊಳುವಾರು ಮಹಮ್ಮದ್ ಕುಂಞಿ ಅವರ ಕೃತಿ
A) ಕರಾವಳಿಯಲ್ಲಿ ಗಂಗಾಲಗ್ನ B) ಅತ್ತಿತ್ತಗಳ ಸುತ್ತಮುತ್ತ
C) ಅಮೃತಬಳ್ಳಿ ಕಷಾಯ D) ಬೆಳ್ಳಿಯ ಸಂಕೋಲೆಗಳು

37. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗುವುದಿಲ್ಲ
A) ಜೀವನ : ಮಾಸ್ತಿ ವೆಂಕಟೇಶ ಅಯ್ಯಂಗಾರ್
B) ಸಂಕ್ರಮಣ : ಚಂದ್ರಶೇಖರ ಪಾಟೀಲ
C) ಪ್ರಬುದ್ಧ ಕರ್ನಾಟಕ : ಬೆಂಗಳೂರು ವಿಶ್ವವಿದ್ಯಾಲಯ
D) ಕರ್ನಾಟಕ ಭಾರತಿ : ಕರ್ನಾಟಕ ವಿಶ್ವವಿದ್ಯಾಲಯ

38. 'ಮಹಾಭಾರತ ಮಂಥನ' ಕೃತಿಯ ಕರ್ತೃ
A) ರಹಮತ್ ತರೀಕೆರೆ B) ವಿ.ಎಂ. ಇನಾಂದಾರ್
C) ಸಿ.ಎನ್. ರಾಮಚಂದ್ರನ್ D) ಸಿ. ವೀರಣ್ಣ

39. ಇದು ದಲಿತ ಪಂಥಕ್ಕೆ ಸೇರಿದ ಕೃತಿ
A) ಕಪ್ಪು ಕಣ್ಣಿನ ಹುಡುಗಿ B) ಕಾಡಿನ ಕತ್ತಲಲ್ಲಿ
C) ಒಣ ಮರದ ಗಿಳಿಗಳು D) ಪಾಂಚಾಲಿ

40. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?

| | | |
|---|---|---|
| A) | ಕನ್ನಡ ಗ್ರಂಥ ಸಂಪಾದನೆ | : ಎಂ.ಎಂ. ಕಲ್ಬುರ್ಗಿ |
| B) | ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ | : ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ |
| C) | ಪಂಪಭಾರತ ದೀಪಿಕೆ | : ಕೆ.ವಿ. ರಾಘವಾಚಾರ್ |
| D) | ಕಿಟೆಲ್ಲರ ಕನ್ನಡ : ಇಂಗ್ಲಿಷ್ ನಿಘಂಟನ್ನು ಪರಿಷ್ಕರಿಸಿದವರು | : ಆರ್. ನರಸಿಂಹಾಚಾರ್ |

41. ಇತರ ವಿದ್ವಾಂಸರ ಹೇಳಿಕೆಗಳನ್ನು ಸಂಶೋಧನೆಯ ಸಂದರ್ಭದಲ್ಲಿ ಯಥಾವತ್ತಾಗಿ ಉಲ್ಲೇಖಿಸುವುದನ್ನು ಏನೆಂದು ಕರೆಯುತ್ತಾರೆ?

A) ಅಡಿಟಿಪ್ಪಣಿ B) ಗ್ರಂಥ ಸೂಚಿ C) ಪರಾಮರ್ಶನ D) ಉದ್ಧರಣೆ

42. ಇವುಗಳಲ್ಲಿ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳು

1. ಅನುಕರಣ ಮತ್ತು ಭವ್ಯತೆ
2. ಸಾಧಾರಣೀಕರಣ ಮತ್ತು ಮಾನಸಿಕ ದೂರ
3. ವ್ಯಕ್ತಿತ್ವ ನಿರಸನ ಮತ್ತು ಗುಣೀಭೂತ ವ್ಯಂಗ್ಯ
4. ಕೆಥಾರ್ಸಿಸ್ ಮತ್ತು ವಸ್ತು ಪ್ರತಿರೂಪ

ಸರಿಯಾದ ಉತ್ತರಗಳು

A) 1 ಮತ್ತು 3 B) 2 ಮತ್ತು 4 C) 1 ಮತ್ತು 4 D) 2 ಮತ್ತು 3

43. ಬಿಳಿಯರಳೆಯಂತೆ, ಗಂಗಾ ಜಲದಂತೆ, ಎಸೆವ ಅಜಿತಸೇನ ಮುನಿಯ ಗುಣಾವಳಿಯಂತೆ ಪವಿತ್ರವಾದುದು ಅತ್ತಿಮಬ್ಬೆಯ ಚರಿತೆ ಎಂದು ಹೊಗಳಿದ ಕವಿ.

A) ಚಾವುಂಡರಾಯ B) ಒಂದನೆಯ ನಾಗವರ್ಮ
C) ಪೊನ್ನ D) ರನ್ನ

44. ಇವುಗಳಲ್ಲಿ ಅಕ್ಕ ಮಹಾದೇವಿಯ ಕೃತಿ

A) ಕರಣ ಹಸುಗೆ B) ಯೋಗಾಂಗ ತ್ರಿವಿಧಿ
C) ಮಂತ್ರಗೋಪ್ಯ D) ಕಾಲಜ್ಞಾನ ವಚನ

45. 'ಕನ್ನಡ ಭಾಷೆ ಮತ್ತು ವ್ಯಾಕರಣಗಳು – ಒಂದು ಅಧ್ಯಯನ' ಎಂಬ ಗ್ರಂಥವನ್ನು ಬರೆದವರು

A) ಕೆ. ಕುಶಾಲಪ್ಪ ಗೌಡ B) ಎಂ. ಚಿದಾನಂದ ಮೂರ್ತಿ
C) ಟಿ.ವಿ. ವೆಂಕಟಾಚಲ ಶಾಸ್ತ್ರಿ D) ಹಂ.ಪ. ನಾಗರಾಜಯ್ಯ

46. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ?

| | | | |
|---|---|---|---|
| A) | ಶೂರಸೇನ ಚರಿತ್ರೆ | : | ಬಸವಪ್ಪ ಶಾಸ್ತ್ರಿ |
| B) | ವಿಗಡ ವಿಕ್ರಮ ರಾಯ | : | ಎಂ.ಎಸ್. ಪುಟ್ಟಣ್ಣ |
| C) | ಗೋಕುಲ ನಿರ್ಗಮನ | : | ಪು.ತಿ.ನ. |
| D) | ಸಿರಿ ಸಂಪಿಗೆ | : | ಚಂದ್ರಶೇಖರ ಕಂಬಾರ |

47. 'ಅವರ್ ಸ್ವರ್ಗಾಗ್ರಮಾನ್ ಏಱಿದಾರ್' – ಇಲ್ಲಿರುವ ಪ್ರತ್ಯಯಗಳು ಕನ್ನಡ ಭಾಷೆಯ ಯಾವ ಅವಸ್ಥೆಗೆ ಸೇರಿವೆ?

A) ನಡುಗನ್ನಡ B) ಹಳೆಗನ್ನಡ
C) ಹೊಸಗನ್ನಡ D) ಪೂರ್ವದ ಹಳಗನ್ನಡ

48. ಇವುಗಳಲ್ಲಿ ಯಾವುದು ತಪ್ಪಾದ ರೂಪಾಂತರ

A) ಇಱುಂಪೆ > ಇರುವೆ B) ಅಶ್ರದ್ಧೆ > ಅಸಡ್ಡೆ
C) ಅಗಸ > ಅಸಗ D) ಎಳ್ + ನೆಯ್ > ಎಣ್ಣೆ

49. ಕನ್ನಡ ಭಾಷೆಯಲ್ಲಿ ಬಳಕೆಗೊಳ್ಳುತ್ತಿರುವ ಫಾರಸಿ ಭಾಷಾ ಪದಗಳು
A) ಗುಮಾಸ್ತ, ದುಬಾರಿ, ಮೈದಾನ B) ತಗಾದೆ, ತರ್ಜುಮೆ, ಪಗಾರ
C) ರೋಟಿ, ಲಕೋಟೆ, ಕಾಡು D) ಪಾದ್ರಿ, ಆಸ್ಪತ್ರೆ, ನಂಬ್ರ

50. ಗಣಕ ಯಂತ್ರ ವಿಜ್ಞಾನದಲ್ಲಿ 'ತಂತ್ರಾಂಶ' ಎಂಬುದನ್ನು ಯಾವ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ.
A) ಪೆನ್‌ಡ್ರೈವ್ B) ಇಂಟರ್‌ನೆಟ್ C) ಸಾಫ್ಟ್‌ವೇರ್ D) ವೆಬ್‌ಸೈಟ್

51. ಇವುಗಳಲ್ಲಿ ಸಂಶೋಧನ ಮಹಾಪ್ರಬಂಧ (ಪಿಹೆಚ್.ಡಿ) ಯಾವುದು?
A) ಪಾಶ್ಚಾತ್ಯ ಗಂಭೀರ ನಾಟಕಗಳು : ಎಸ್.ವಿ. ರಂಗಣ್ಣ
B) ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ : ಎಂ.ಎಂ. ಕಲಬುರ್ಗಿ
C) ಮಹಾಕವಿ ರಾಘವಾಂಕ : ಆರ್.ಸಿ. ಹಿರೇಮಠ
D) ನಾಡೋಜ ಪಂಪ : ಮುಳಿಯ ತಿಮ್ಮಪ್ಪಯ್ಯ

52. 'ಸಂಶೋಧನೆ'ಯ ಸಂಬಂಧವಾಗಿ ವಿಷಯ ಸಂಗ್ರಹಣೆಯಲ್ಲಿ ಪರಿಗಣಿಸುವ ಮೌಖಿಕ ಆಕರಗಳು
A) ಶಾಸನಗಳು B) ಗ್ರಂಥಗಳು C) ಕ್ರೀಡೆಗಳು D) ಮಾಹಿತಿದಾರರು

53. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?
A) ಗೌಡ ಕನ್ನಡ : ಪ್ರಾದೇಶಿಕ ಉಪಭಾಷೆ
B) ಹಾಲು, ನೀರು : ಅಮಹತ್ ಲಿಂಗ
C) ನೀನು, ಅವನು : ಅಭಿವ್ಯಾಪಕ ಸರ್ವನಾಮ
D) ಹೇಳನು, ಕೇಳನು : ಪ್ರೇರಣಾರ್ಥಕ

54. ಇಲ್ಲೈ > ಎಲೆ; ಕುಳಲ್ > ಕೊಳಲು ಇಲ್ಲಿ ಕಾಣುವ ಪದಾರಂಭದ ಧ್ವನಿ ವ್ಯತ್ಯಾಸವನ್ನು ಏನೆಂದು ಕರೆಯಲಾಗುತ್ತದೆ.
A) ಸ್ವರ ವ್ಯತ್ಯಯ B) ಆದಿಸ್ವರ ಲೋಪ
C) ಅಂತ್ಯಸ್ವರ ಲೋಪ D) ಮಧ್ಯ ಸ್ವರಾಗಮ

55. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ?
A) ಭರತ : ನಾಟ್ಯಶಾಸ್ತ್ರ
B) ಎರಡನೇ ನಾಗವರ್ಮ : ಉದಯಾದಿತ್ಯಾಲಂಕಾರ
C) ಮಮ್ಮಟ : ಕಾವ್ಯ ಪ್ರಕಾಶ
D) ರಾಜಶೇಖರ : ಕಾವ್ಯ ಮೀಮಾಂಸಾ

56. ಇದು ಶ್ರೀಕಂಠೇಶ ಗೌಡರು ರಚಿಸಿದ ನಾಟಕ
A) ಉದರ ವೈರಾಗ್ಯ B) ಸತ್ತವನ ಸಂತಾಪ
C) ಮಣ್ಣಿನ ಬೊಂಬೆ D) ರಾಮವರ್ಮ ಲೀಲಾವತಿ

57. ದ್ರಾವಿಡ ಭಾಷೆಗಳಲ್ಲಿ ಸಮಾವೇಶಕ ಮತ್ತು ಅಸಮಾವೇಶಕ ಎಂಬೆರಡು ಬಗೆಯ ರೂಪಗಳನ್ನು ಹೊಂದಿರುವ ಸರ್ವನಾಮ
A) ಉತ್ತಮ ಪುರುಷ ಬಹುವಚನ B) ಮಧ್ಯಮ ಪುರುಷ ಬಹುವಚನ
C) ಆತ್ಮಾರ್ಥಕ ಸರ್ವನಾಮ ಏಕವಚನ D) ಮಧ್ಯಮ ಪುರುಷ ಏಕವಚನ

58. ಇದು ಜಿ.ಎಚ್. ನಾಯಕರ ವಿಮರ್ಶಾ ಕೃತಿ
A) ಕಾವ್ಯ ವಿಹಾರ B) ಸಾತತ್ಯ C) ಅರ್ಥಲೋಕ D) ನಿಜದನಿ

59. ಈಡಿಪಸ್ ನಾಟಕವನ್ನು ಕನ್ನಡಕ್ಕೆ ಭಾಷಾಂತರಿಸಿದವರು

A) ವೇಣುಗೋಪಾಲ ಕಾಸರಗೋಡು B) ಚಂದ್ರಕಾಂತ ಕುಸನೂರ

C) ಪಿ. ಲಂಕೇಶ್ D) ಶ್ರೀರಂಗ

60. ಹರಿಹರನ ಪುರಾತನ ರಗಳೆಗಳಿಗೆ ಆಕರವಾದ ಗ್ರಂಥ

A) ಶಿಲಪ್ಪದಿಗಾರಂ B) ಪೆರಿಯ ಪುರಾಣಂ

C) ಕುಮಾರ ಸಂಭವಂ D) ಪೂರ್ವಪುರಾಣ

61. ಎಲ್.ಎಸ್. ಶೇಷಗಿರಿ ರಾವ್ ಅವರು ಬರೆದ ಕೃತಿ

A) ಸಿರಿಸಂಪದ B) ಭುವನದ ಭಾಗ್ಯ

C) ನೂರು ಮರ ನೂರು ಸ್ವರ D) ನಾಟಕ ಸಾಹಿತ್ಯ ಮತ್ತು ರಂಗಭೂಮಿ

62. 'ಗರ್ಜನೆ' ಕಥಾ ಸಂಕಲನದ ಕರ್ತೃ

A) ವೀಣಾ ಶಾಂತೇಶ್ವರ B) ಎಂ. ವ್ಯಾಸ

C) ದೇವನೂರು ಮಹಾದೇವ D) ಬೆಸಗರಹಳ್ಳಿ ರಾಮಣ್ಣ

63. ಇವುಗಳಲ್ಲಿ ಯಾವುದು ಹೊಂದಾಣಿಕೆಯಗುತ್ತದೆ?

A) ಮಹಾಚೈತ್ರ : ಎಚ್.ಎಸ್. ಶಿವಪ್ರಕಾಶ್

B) ಸಂಕ್ರಾಂತಿ : ಚಂದ್ರಶೇಖರ ಪಾಟೀಲ

C) ಕೀಚಕ : ಶ್ರೀರಂಗ

D) ಹುಚ್ಚನ ಹೆಂಡತಿ : ಚಂದ್ರಕಾಂತ ಕುಸನೂರ

64. 'ಧ್ವನಿಮಾ' ನಿರ್ಣಯಕ್ಕೆ ಸಂಬಂಧಿಸಿದ ತತ್ವಗಳಲ್ಲಿ ಇದೂ ಒಂದು

A) ಅರ್ಥಸಾಮ್ಯ ತತ್ವ B) ಪೂರಕ ಪ್ರಸಾರ ತತ್ವ

C) ಸ್ಥಾನ ಸಾಮ್ಯ ತತ್ವ D) ರೂಪಸಾಮ್ಯ ತತ್ವ

65. ಇವುಗಳಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರು ರಚಿಸಿದ ಕವನ

A) ನನ್ನ ಅವತಾರ B) ದೀಪಧಾರಿ C) ಏಕಮೇವ D) ಹುಲ್ಲುಕಟಿಗ

66. ಕವಿ ನಾಗಚಂದ್ರನ ಆಶ್ರಯದಾತ

A) ಚಾಲುಕ್ಯ ಜಯಸಿಂಹ ಜಗದೇಕ ಮಲ್ಲ

B) ಹೊಯ್ಸಳ ಒಂದನೆಯ ಬಲ್ಲಾಳ

C) ಹೊಯ್ಸಳ ನರಸಿಂಹ

D) ಚಾಲುಕ್ಯ ಆಹಮಮಲ್ಲ

67. ಇದು ಕನ್ನಡದ ಒಂದು ಬ್ಲಾಗ್ ಪತ್ರಿಕೋದ್ಯಮ

A) ಅವಧಿ B) ಜನತೆ ಡಾಟ್ ಕೋಂ

C) ವಿಜಯವಾಣಿ D) ಶೋಧ

68. 'ಬೇರು ಸತ್ತೀ ಮರವನೆತ್ತಿ ನಿಲ್ಲಿಸು ಮಗೂ
ಕೊಂಬೆ ರೆಂಬೆಗಳಿರಲಿ ಇದ್ದ ಹಾಗೆ' – ಈ ಸಾಲುಗಳನ್ನು ಬರೆದ ಕವಿ

A) ಬಿ.ಎಂ.ಶ್ರೀ B) ಕೆ.ಎಸ್. ನರಸಿಂಹ ಸ್ವಾಮಿ

C) ಎಂ. ಗೋಪಾಲಕೃಷ್ಣ ಅಡಿಗ D) ರಂಜಾನ್ ದರ್ಗಾ

69. ಈ ಹೇಳಿಕೆಗಳನ್ನು ಗಮನಿಸಿರಿ

1. ಶಬ್ದ ಸ್ಮೃತಿ ಎಂಬುದು ಕವಿರಾಜಮಾರ್ಗ ಎಂಬ ಅಲಂಕಾರ ಗ್ರಂಥದ ಮೊದಲ ಅಧ್ಯಾಯ
2. ನಿಟ್ಟೂರ ನಂಜಯ್ಯನು ಶಬ್ದಮಣಿದರ್ಪಣದ ಸೂತ್ರಗಳಿಗೆ ಟೀಕೆಯನ್ನು ಬರೆದಿರುವನು

ಸರಿಯಾದ ಉತ್ತರಗಳು

A) ಮೊದಲನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು
B) ಮೊದಲನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ
C) ಎರಡು ಹೇಳಿಕೆಗಳೂ ಸರಿ
D) ಎರಡು ಹೇಳಿಕೆಗಳೂ ತಪ್ಪು

70. ಇವುಗಳಲ್ಲಿ ಎಂ. ವ್ಯಾಸ ಅವರು ಬರೆದ ಸಣ್ಣ ಕತೆ

A) ಪ್ರಾಯಶ್ಚಿತ್ತ B) ಹುತ್ತ
C) ಅಭಿಮಾನ D) ಆಕಾಶ ಮತ್ತು ಬೆಕ್ಕು

71. 'ಮುಖಾಂತರ' – ಈ ಕಾದಂಬರಿಯ ಲೇಖಕರು

A) ನಾ. ಮೊಗಸಾಲೆ B) ಕೆ.ಟಿ. ಗಟ್ಟಿ
C) ದೇವನೂರು ಮಹಾದೇವ D) ತ.ರಾ. ಸುಬ್ಬರಾಯ

72. ಇವುಗಳಲ್ಲಿ ಭಾಷಾಂತರ ಕೃತಿ

A) ಇಂದಿರಾಬಾಯಿ B) ಬೆಕ್ಕಿನ ಕಣ್ಣು
C) ವಾಲ್ಮೀಕಿ ವಿಜಯ D) ಚೌಕಟ್ಟಿನ ಮನೆ

73. 'ಕವಿತ್ವ ಬೀಜಂ ಪ್ರತಿಭಾನಂ' ಎಂದು ಹೇಳಿದ ಅಲಂಕಾರಿಕ

A) ದಂಡಿ B) ಭಾಮಹ C) ವಾಮನ D) ವಿಶ್ವನಾಥ

74. ಇವು ಕನ್ನಡದ ತದ್ಧಿತ ಪ್ರತ್ಯಯಗಳು

1. ಇಗ, ವಂತ 2. ಇಸು, ಅವು
3. ಗಾರ, ತನ 4. ಇಕೆ, ಉದು

ಸರಿಯಾದ ಉತ್ತರಗಳು

A) 1 ಮತ್ತು 4 B) 1 ಮತ್ತು 3 C) 2 ಮತ್ತು 3 D) 2 ಮತ್ತು 4

75. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?

A) ರೀತಿರಾತ್ಮಾ ಕಾವ್ಯಸ್ಯ : ವಾಮನ
B) ವಾಕ್ಯಂ ರಸಾತ್ಮಕಂ ಕಾವ್ಯಂ : ವಿಶ್ವನಾಥ
C) ಧ್ವನಿಯೆಂಬುದಳಂಕಾರಂ : ಶ್ರೀವಿಜಯ
D) ಕಾವ್ಯಸ್ಯಾತ್ಮಾ ಧ್ವನಿಃ : ಭಾಮಹ

76. ರೈತ ಚಳುವಳಿ ಹಿನ್ನೆಲೆಯಾಗಿರುವ ಕಾದಂಬರಿ

A) ಚಿರಸ್ಮರಣೆ B) ಮಾಡಿದ್ದುಣ್ಣೋ ಮಹಾರಾಯ
C) ದಾಟು D) ಭಾರತೀಪುರ

77. ಇವುಗಳಲ್ಲಿ ಕರ್ಣಾಟ ಭಾರತ ಕಥಾಮಂಜರಿಯಲ್ಲಿ ಬರುವ ಮಾತು
A) ಹೊತ್ತು ಹೋಗದೆ ಪುಂಡರಾಲಿಪ ಮತ್ತಮತಿಗಳ ಗೋಷ್ಠಿಯಲ್ಲಿದು
B) ಹೆಂಗಳ ರೂಪು ಗಂಡರಿಗೆ, ಗಂಡರ ರೂಪು ಹೆಂಗಳ ಸೋಲಿಪುದು
C) ಪೊಸಮಾಲೆಯಿರ್ದಡೇನು ತವೆ ಮುಡಿವರಿಲ್ಲದೊಡೆ
D) ಸುರರ ಸತಿಯರನೊಲ್ಲೆವು ಎಮಗೆ ಎಮ್ಮರ ಮನೆಯ ನಾರಿಯರೆ ಸಾಕು.

78. ಇವುಗಳಲ್ಲಿ ನುಡಿಗಟ್ಟು ಯಾವುದು?
A) ತಾಳಿದವನು ಬಾಳಿಯಾನು B) ಅಡಿಗಡಿಗೆ
C) ಗುಡ್ಡಕ್ಕೆ ಕಲ್ಲು ಹೊರು D) ಹಣ್ಣು ಹಂಪಲು

79. ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಗಳನ್ನು ಒಳಗೊಂಡ ಶಾಸನ
A) ಗಂಗಾಧರಂ ಶಾಸನ B) ಬಾದಾಮಿ ಶಾಸನ
C) ಹಲ್ಮಿಡಿ ಶಾಸನ D) ಶ್ರವಣ ಬೆಳಗೊಳದ ಬುಕ್ಕರಾಯನ ಶಾಸನ

80. ದುರ್ಗಸಿಂಹನ 'ಪಂಚತಂತ್ರ' ಕೃತಿಯಲ್ಲಿ ನಿರೂಪಿತವಾದ ಐದು ತಂತ್ರಗಳಲ್ಲಿ ಮೊದಲನೆಯದು
A) ಮಿತ್ರ ಕಾರ್ಯ B) ವಂಚನಾ C) ವಿಶ್ವಾಸ D) ಭೇದ

81. 'ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ?' – ಈ ಮಾತನ್ನು ಹೇಳಿದ ವಚನಕಾರರು
A) ಅಲ್ಲಮಪ್ರಭು B) ಜೇಡರ ದಾಸಿಮಯ್ಯ
C) ಮುಕ್ತಾಯಕ್ಕ D) ಸಿದ್ಧರಾಮ

82. ಚಂಪುವಿನ ಲಕ್ಷಣವನ್ನು ಹೇಳುವ ಅತಿ ಪ್ರಾಚೀನ ಗ್ರಂಥ
A) ಕಾವ್ಯಾದರ್ಶ B) ಸಾಹಿತ್ಯ ದರ್ಪಣ
C) ಕಾವ್ಯಾಲಂಕಾರ D) ಕಾವ್ಯಾವಲೋಕನ

83. ವಡ್ಡಾರಾಧನೆಯಲ್ಲಿ ಬರುವ 'ದ್ರಮ್ಮ, ದೀನಾರ' ಎಂಬ ಪದಗಳ ಮೂಲ
A) ಫಾರ್ಸಿ B) ಅರಬಿ C) ಪ್ರಾಕೃತ D) ಲ್ಯಾಟಿನ್

84. "ಬೇಡಮ್ಮ ನೀನುಂ ತಪೋವನಮಂ ಸಾರ್ವುದುಂ ಆನದಾರ್ಗೆ ಮೆಚ್ಚಿವೆಂ ಮತ್ತಾಜ್ಯ ಸಾಮ್ರಾಜ್ಯಮಂ' – ಈ ಮಾತು ಬರುವ ಕಾವ್ಯ
A) ಅಜಿತನಾಥ ಪುರಾಣ B) ವರ್ಧಮಾನ ಪುರಾಣ
C) ಆದಿಪುರಾಣ D) ಅನಂತನಾಥ ಪುರಾಣ

85. ದೇಕಬ್ಬೆ ಎಂಬ ಮಹಿಳೆ ಮಹಾಸತಿಯಾದುದನ್ನು ಮನ ಕರಗುವಂತೆ ಚಿತ್ರಿಸಿದ ಶಾಸನ
A) ಬಾದಾಮಿ ಶಾಸನ B) ಬೆಳತೂರು ಶಾಸನ
C) ತಳಂಗೆರೆ ಶಾಸನ D) ಗಂಗಾಧರಂ ಶಾಸನ

86. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?
A) ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು : ಅಕ್ಕಮಹಾದೇವಿ
B) ಕೂಸಂ ಚಿವುಂಟುವ್ವೆ ತೊಟ್ಟಿಲಂ ತೂಗುವ್ವೆ : ಮುಕ್ತಾಯಕ್ಕ
C) ಬೆರಸಲ್ಕೆ ತಕ್ಕುದೆ ಘೃತಮುಮಂ ತೈಲಮುಮಂ : ನಯನೇನ
D) ಸಂಸಾರವೆಂಬ ಹೆಣ ಬಿದ್ದಿದೆ
ತಿನಬಂದ ನಾಯ ಜಗಳವ ನೋಡಿರೇ : ಚನ್ನಬಸವಣ್ಣ

87. ಇವುಗಳಲ್ಲಿ ಯಶವಂತ ಚಿತ್ತಾಲರ ಕಥಾಸಂಕಲನ

A) ಕಂಬನಿ ಮತ್ತು ಚಿಗುರು
B) ಕಣ್ಣುಮುಚ್ಚಾಲೆ
C) ತೊಟ್ಟಿಲ ತೂಗಿತು
D) ಕಥೆಯಾದಳು ಹುಡುಗಿ

88. ಈ ಹೇಳಿಕೆಗಳನ್ನು ಗಮನಿಸಿರಿ

1. ಆಕೃತಿಮಾ ಎಂಬುದು ಅರ್ಥವಿಲ್ಲದ ಕನಿಷ್ಠತಮ ಭಾಷಿಕ ಘಟಕ
2. ಧ್ವನಿಮಾ ಎಂಬುದು ಅರ್ಥಪೂರ್ಣವಾದ ಭಾಷಿಕ ಘಟಕ

ಸರಿಯಾದ ಉತ್ತರಗಳು

A) ಮೊದಲನೇ ಹೇಳಿಕೆ ತಪ್ಪು; ಎರಡನೇ ಹೇಳಿಕೆ ಸರಿ
B) ಮೊದಲನೇ ಹೇಳಿಕೆ ಸರಿ; ಎರಡನೇ ಹೇಳಿಕೆ ತಪ್ಪು
C) ಎರಡು ಹೇಳಿಕೆಗಳೂ ಸರಿ
D) ಎರಡು ಹೇಳಿಕೆಗಳೂ ತಪ್ಪು

89. ಸಂಸ್ಕಾರ ಕಾದಂಬರಿಯ ಕೇಂದ್ರ ಪಾತ್ರ

A) ನಾರಣಪ್ಪ
B) ಪ್ರಾಣೇಶಾಚಾರ್ಯ
C) ಚಂದ್ರಿ
D) ಮಾಲೇರ ಪುಟ್ಟ

90. 'ನಿಸರ್ಗ' ಕಾದಂಬರಿಯ ಕರ್ತೃ

A) ಪೂರ್ಣಚಂದ್ರ ತೇಜಸ್ವಿ
B) ವ್ಯಾಸರಾಯ ಬಲ್ಲಾಳ
C) ಮಿರ್ಜಿ ಅಣ್ಣಾರಾಯ
D) ಕೆ.ವಿ. ಅಯ್ಯರ್

91. ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ.

A) ನಿಸರ್ಗ, ಕ್ಷಿತಿಜ, ಇಂದಿರಾಬಾಯಿ, ಮಾಧವಿ
B) ಮಾಧವಿ, ಕ್ಷಿತಿಜ, ನಿಸರ್ಗ, ಇಂದಿರಾಬಾಯಿ
C) ಕ್ಷಿತಿಜ, ಮಾಧವಿ, ಇಂದಿರಾಬಾಯಿ, ನಿಸರ್ಗ
D) ಇಂದಿರಾಬಾಯಿ, ನಿಸರ್ಗ, ಮಾಧವಿ, ಕ್ಷಿತಿಜ

92. ಕವಿ ರಾಘವಾಂಕನು ಚಿತ್ರಿಸಿದ ಸ್ತ್ರೀಪಾತ್ರ

A) ಪದ್ಮಾವತಿ
B) ಸುನಂದೆ
C) ದಮಯಂತಿ
D) ಯಶೋದೆ

93. 'ತ್ರಿಷಷ್ಟಿಲಕ್ಷಣ ಮಹಾಪುರಾಣ' ಎಂಬ ಪರ್ಯಾಯ ನಾಮ ಪಡೆದ ಕೃತಿ

A) ಮಹಾಪುರಾಣ
B) ವಡ್ಡಾರಾಧನೆ
C) ಚಾವುಂಡರಾಯ ಪುರಾಣ
D) ಆದಿಪುರಾಣ

94. ಈ ಹೇಳಿಕೆಗಳನ್ನು ಗಮನಿಸಿರಿ.

1. ಪ್ರತಿಭೆ, ಅಭ್ಯಾಸ, ಕಾವ್ಯ ಪರಿಚಯ – ಇವು ಕಾವ್ಯಕ್ಕೆ ಕಾರಣಗಳು
2. ಉಪಮಾ, ರೂಪಕ, ಅರ್ಥಾಂತರ ನ್ಯಾಸ – ಇವು ಶಬ್ದಾಲಂಕಾರಗಳು

ಸರಿಯಾದ ಉತ್ತರಗಳು

A) ಮೊದಲನೇ ಹೇಳಿಕೆ ತಪ್ಪು; ಎರಡನೇ ಹೇಳಿಕೆ ಸರಿ
B) ಮೊದಲನೇ ಹೇಳಿಕೆ ಸರಿ; ಎರಡನೇ ಹೇಳಿಕೆ ತಪ್ಪು
C) ಎರಡು ಹೇಳಿಕೆಗಳೂ ಸರಿ
D) ಎರಡು ಹೇಳಿಕೆಗಳೂ ತಪ್ಪು

95. ಬರಗೂರು ರಾಮಚಂದ್ರಪ್ಪನವರ ಕೃತಿ

A) ಮಲೆನಾಡಿನ ಚಿತ್ರಗಳು B) ನಿರಾಭರಣ ಸುಂದರಿ
C) ವಿಚಾರ ಪಥ D) ಸಂಸ್ಕೃತಿ ಮತ್ತು ಸೃಜನಶೀಲತೆ

96. ಇವುಗಳಲ್ಲಿ ಶ್ರೀರಂಗರು ಬರೆದ ನಾಟಕ

A) ಶೋಕಚಕ್ರ B) ಸಂಕ್ರಾಂತಿ C) ಕೊಡೆಗಳು D) ಸಿರಿಸಂಪಿಗೆ

97. ತಿರುಮಲಾರ್ಯನು ಬರೆದ ಕಾವ್ಯ ಲಕ್ಷಣ ಗ್ರಂಥ

A) ರಸರತ್ನಾಕರ B) ಅಪ್ರತಿಮ ವೀರಚರಿತೆ
C) ಶೃಂಗಾರ ರತ್ನಾಕರ D) ಹೃದಯ ದರ್ಪಣ

98. ಪೊನ್ನನ ಶಾಂತಿಪುರಾಣದಲ್ಲಿ ಬರುವ ಜ್ಯೋತಿಃಪ್ರಭೆಯ ಸ್ವಯಂವರ ವರ್ಣನೆಯ ಮೇಲೆ ಪ್ರಭಾವ ಬೀರಿದ ಸಂಸ್ಕೃತ ಕವಿ

A) ಭಾರವಿ B) ಭಾಸ C) ಕಾಳಿದಾಸ D) ಭವಭೂತಿ

99. ಇವುಗಳಲ್ಲಿ ಚಂಪೂಕಾವ್ಯ

A) ಯಶೋಧರ ಚರಿತೆ B) ಚಾವುಂಡರಾಯ ಪುರಾಣ
C) ಮೋಹನ ತರಂಗಿಣಿ D) ಕರ್ಣಾಟಕ ಕಾದಂಬರಿ

100. ಗೀತಾ ನಾಗಭೂಷಣ ಅವರ ಕೃತಿ

A) ಅವಾಂತರ B) ಸ್ವರೂಪ
C) ಗಿರಿಯ ನವಿಲು D) ಮುಂಜಾವಿನಿಂದ ಮುಂಜಾವು

101. 'ಅಬಚೂರಿನ ಪೋಸ್ಟಾಫೀಸು' ಕತೆಯಲ್ಲಿ ಬರುವ ಪಾತ್ರಗಳು

A) ಸರೋಜ, ಹೊಟೇಲ್ ತಿಮ್ಮಯ್ಯ B) ಕಾವೇರಿ, ಮಾಚಮ್ಮ
C) ಸಂಕಪ್ಪಯ್ಯ, ಲಕ್ಷ್ಮೀ D) ಹೊನ್ನಪ್ಪಾಚಾರಿ, ಅಲ್ಲೀಜಾನ್ ಸಾಬ್

102. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ

A) ನಳ ಚರಿತ್ರೆ : ರಗಳೆ
B) ವೀರೇಶ ಚರಿತೆ : ಭೋಗ ಷಟ್ಪದಿ
C) ಸೊಬಗಿನ ಸೋನೆ : ಪರಿವರ್ಧಿನಿ ಷಟ್ಪದಿ
D) ಕನ್ನಡ ಭಾಗವತ : ಭಾಮಿನಿ ಷಟ್ಪದಿ

103. 'ಕರ್ಣಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ಕೃತಿಯನ್ನು ರಚಿಸಿದವರು

A) ಎಚ್. ತಿಪ್ಪೇರುದ್ರ ಸ್ವಾಮಿ B) ಶಂಬಾ ಜೋಶಿ
C) ಎಂ. ಚಿದಾನಂದ ಮೂರ್ತಿ D) ಎ. ವೆಂಕಟ ಸುಬ್ಬಯ್ಯ

104. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ?

A) ವೆಂಕಟರಾಜ ಪುಣಿಂಚತ್ತಾಯ : ಕನ್ನಡ ಭಾಗವತ
B) ಸೇಡಿಯಾಪು ಕೃಷ್ಣ ಭಟ್ಟ : ಛಂದೋಗತಿ
C) ಮುಳಿಯ ತಿಮ್ಮಪ್ಪಯ್ಯ : ಪಾರ್ತಿಸುಬ್ಬ
D) ರಹಮತ್ ತರೀಕೆರೆ : ಪ್ರತಿ ಸಂಸ್ಕೃತಿ

105. ಇವರಲ್ಲಿ ಸ್ತ್ರೀವಾದಿ ವಿಮರ್ಶಕರು

A) ಸಿ. ವೀರಣ್ಣ B) ಕೀರ್ತಿನಾಥ ಕುರ್ತಕೋಟಿ
C) ಗಿರಡ್ಡಿ ಗೋವಿಂದರಾಜ D) ವಿಜಯಾ ದಬ್ಬೆ

106. 'ಮರಭನಯಯಯ' – ಈ ಅನುಕ್ರಮ ಗಣವಿನ್ಯಾಸವನ್ನು ಹೊಂದಿರುವ ಛಂದೋರೂಪ

A) ಶಾರ್ದೂಲ ವಿಕ್ರೀಡಿತ B) ಮತ್ತೇಭ ವಿಕ್ರೀಡಿತ
C) ಸ್ರಗ್ಧರೆ D) ಉತ್ಪಲ ಮಾಲೆ

107. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?

A) ಅಂಶಗಣ ಪ್ರಧಾನ : ಚಂಪಕಮಾಲೆ
B) ಚತುರ್ಮಾತ್ರಾಗಣ : ಮಂದಾನಿಲ ರಗಳೆ
C) ವರ್ಣಗಣ ಪ್ರಧಾನ : ಮಹಾಸಗ್ಧರೆ
D) ಪಂಚಮಾತ್ರಾಗಣ : ಲಲಿತ ರಗಳೆ

108. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದುತ್ತದೆ?

A) ಎಲ್. ಬಸವರಾಜು : 'ಜೈಮಿನಿ ಭಾರತ' ಕೃತಿಯ ಸಂಪಾದನೆ
B) ಎಸ್.ಎಸ್. ಬಸವನಾಳ : 'ಪ್ರಭುಲಿಂಗ ಲೀಲೆ' ಕಾವ್ಯದ ಸಂಪಾದನೆ
C) ಡಿ.ಎಲ್. ನರಸಿಂಹಾಚಾರ್ : 'ನಂಬಿಯಣ್ಣನ ರಗಳೆ'ಯ ಸಂಪಾದನೆ
D) ಕೆ.ವಿ. ರಾಘವಾಚಾರ್ : 'ಕರ್ಣಾಟ ಭಾರತ ಕಥಾ ಮಂಜರಿ'ಯ ಸಂಪಾದನೆ

109. 'ದೇವಪುರನಿಲಯ ಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ' ಇಲ್ಲಿರುವ ಅಲಂಕಾರ

A) ರೂಪಕ B) ದೃಷ್ಟಾಂತ C) ಶ್ಲೇಷೆ D) ಉಪಮಾ

110. ಕರ್ಣಪಾರ್ಯ ಕವಿ ರಚಿಸಿದ ಚಂಪೂ ಕೃತಿ

A) ನೇಮಿನಾಥ ಪುರಾಣ B) ಭುವನೈಕರಾಮಾಭ್ಯುದಯ
C) ವರ್ಧಮಾನ ಪುರಾಣ D) ಜಗನ್ನಾಥ ವಿಜಯ

111. 'ಕಳಹಂಸಾಲಸಯಾನೆಯಂ ಮೃಗಮದಾ ಮೋದಾಸ್ಯ ನಿಶ್ವಾಸೆಯಂ' – ಇಲ್ಲಿರುವ ಪಾದವೊಂದರ ಗಣವಿನ್ಯಾಸ ಯಾವ ಛಂದಸ್ಸಿನದು?

A) ಉತ್ಪಲಮಾಲೆ B) ಚಂಪಕಮಾಲೆ
C) ಶಾರ್ದೂಲ ವಿಕ್ರೀಡಿತ D) ಮತ್ತೇಭವಿಕ್ರೀಡಿತ

112. ಕನಕದಾಸನ ಮೋಹನ ತರಂಗಿಣಿಯ ಛಂದಸ್ಸು

A) ಸಾಂಗತ್ಯ B) ತ್ರಿಪದಿ C) ಷಟ್ಪದಿ D) ಚೌಪದಿ

113. ರಸಪ್ರತೀತಿಯಾಗುವಲ್ಲಿ ಅಡ್ಡಿಯನ್ನುಂಟುಮಾಡುವ ಸಪ್ತ ವಿಘ್ನಗಳನ್ನು ಕುರಿತು ಪ್ರಸ್ತಾಪಿಸಿದವರು

A) ಆನಂದವರ್ಧನ B) ಲೊಲ್ಲಟ
C) ಭಟ್ಟ ನಾಯಕ D) ಅಭಿನವಗುಪ್ತ

114. ರೆ। ಕಿಟಲ್ ಸಂಪಾದಿಸಿದ ಗ್ರಂಥಗಳು

1) ಶಬ್ದಮಣಿದರ್ಪಣ 2) ಪಂಪ ರಾಮಾಯಣ
3) ಕರ್ಣಾಟಕ ಭಾಷಾಭೂಷಣ 4) ಛಂದೋಬುಧಿ

ಸರಿಯಾದ ಉತ್ತರ

A) 1 ಮತ್ತು 2 B) 2 ಮತ್ತು 3 C) 1 ಮತ್ತು 4 D) 3 ಮತ್ತು 4

115. ಪ್ರಾಚೀನ ಕನ್ನಡ ವೈಯಾಕರಣರು ಗುರುತಿಸಿರುವ ದೇಶೀಯಾಕ್ಷರಗಳು

A) ಅ, ಆ, ಎ, ಏ, ಐ
B) ಎ, ಒ, ಱ, ೞ, ಳ
C) ಏ, ಐ, ಓ, ಔ, ಳ
D) ಶ, ಷ, ಸ, ಹ, ಳ

116. ಇವು ಷಟ್ಪದಿ ಛಂದಸ್ಸಿನಲ್ಲಿರುವ ಕಾವ್ಯಗಳು

1. ಪ್ರಭುಲಿಂಗ ಲೀಲೆ
2. ಭರತೇಶ ವೈಭವ
3. ಧರ್ಮಾಮೃತ
4. ತೊರವೆ ರಾಮಾಯಣ

ಸರಿಯಾದ ಉತ್ತರಗಳು

A) 1 ಮತ್ತು 4
B) 1 ಮತ್ತು 3
C) 2 ಮತ್ತು 3
D) 2 ಮತ್ತು 4

117. 'ತಾವೊಳಗಂ ತವೆತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದ ಮಾಟ್ಕೆವೊಲ್' – ಈ ಮಾತು ಯಾವ ಕಾವ್ಯದಲ್ಲಿ ಬರುತ್ತದೆ.

A) ಶಾಂತಿ ಪುರಾಣ
B) ರಾಮಚಂದ್ರಚರಿತ ಪುರಾಣ
C) ಪಂಪಭಾರತ
D) ಗದಾಯುದ್ಧ

118. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?

A) ಶಾರ್ದೂಲವಿಕ್ರೀಡಿತ : ಮಾತ್ರಾಗಣ ಛಂದಸ್ಸು
B) ಕಂದ : ವರ್ಣವೃತ್ತ
C) ಯತಿ : ಅಂತ್ಯಪ್ರಾಸ
D) ಏಳೆ : ಅಂಶಗಣ ಛಂದಸ್ಸು

119. ಭಾಷೆಯಲ್ಲಿ ತಲೆದೋರುವ ಧ್ವನಿ ವ್ಯತ್ಯಾಸಗಳಲ್ಲಿ ಇದೂ ಒಂದು.

A) ಅರ್ಥವಿಕಾಸ
B) ಸ್ವರಪ್ರಾರಂಭ
C) ಅರ್ಥ ಸಂಕೋಚ
D) ಸೌಮ್ಯೋಕ್ತಿ

120. ಜಿ.ಶಂ. ಪರಮಶಿವಯ್ಯನವರು ರಚಿಸಿದ ಕೃತಿ

A) ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು
B) ಕರ್ನಾಟಕ ಜನಪದ ಕತೆಗಳು
C) ಗ್ರಾಮದೇವತೆ ಮಾರಮ್ಮ
D) ಹೊನ್ನ ಬಿತ್ತೇವು ಹೊಲಕೆಲ್ಲ